# ಹೊಸತು

## ಲೋಟಸ್ ಆ್ಯಂಟಿ ಏಜಿಂಗ್ ಕ್ರೀಮ್




ಮಹಿಳೆಯರ ಸೌಂದರ್ಯವರ್ಧಕ ಉತ್ಪನ್ನಗಳ ತಯಾರಿಕಾ ಸಂಸ್ಥೆ ಲೋಟಸ್ ಇದೀಗ ಯೂತ್‌ಆರ್‌ಎಕ್ಸ್ ಆ್ಯಂಟಿ ಏಜಿಂಗ್ ಕ್ರೀಮ್ ತಯಾರಿಸಿದೆ.

ನೈಸರ್ಗಿಕ ಉತ್ಪನ್ನಗಳಿಂದ ಇದನ್ನು ತಯಾರಿಸಲಾಗಿದ್ದು, ನಿಯಮಿತವಾಗಿ ಹಚ್ಚಿಕೊಂಡರೆ ಚರ್ಮವು ತಾರುಣ್ಯದಿಂದ ಕೂಡಿರುತ್ತದೆ. ಚರ್ಮವನ್ನು ಕೋಮಲವಾಗಿಸುವುದರ ಜೊತೆಗೆ ನೆರಿಗೆಗಳನ್ನು ಹೋಗಲಾಡಿಸುತ್ತದೆ ಎಂದು ಕಂಪೆನಿ ಹೇಳಿದೆ. ವಯಸ್ಸಿನಿಂದ ಚರ್ಮದ ಹೊಳಪು ಕಳೆದುಕೊಂಡವರಿಗೆ ಇದು ಸೂಕ್ತ ಆಯ್ಕೆ.

ಇದರ ಬೆಲೆ 545 ರೂಪಾಯಿಗಳು.

ವಿವರಗಳಿಗೆ: www.vichy.in

## ಯುರೇಕಾ ಫೋರ್ಬ್ಸ್ ಪವರ್ ಕ್ಲೀನರ್




ಗೃಹೋಪಯೋಗಿ ಉತ್ಪನ್ನಗಳ ತಯಾರಿಕಾ ಸಂಸ್ಥೆ ಯುರೇಕಾ ಫೋರ್ಬ್ಸ್ ಇದೀಗ ಯುರೆಕ್ಲೀನ್ ಪವರ್‌ಕ್ಲೀನ್ ಹೊರತಂದಿದೆ.

ಮನೆಯೊಳಗೆ ಮತ್ತು ಹೊರಗಡೆ ಕ್ಲೀನ್ ಮಾಡಲು, ಕಾರು ತೊಳೆಯಲು ಇದನ್ನು ಬಳಸಬಹುದು. ಇದರಲ್ಲಿ ಜೆಟ್ ಕ್ಲೀನಿಂಗ್ ತಂತ್ರಜ್ಞಾನವಿದ್ದು, ಬೇಗನೆ ಶುಚಿಗೊಳಿಸಲು ಸಹಕಾರಿ, ಕಡಿಮೆ ಶಬ್ದ ಮತ್ತು ಸುಲಭದ ನಿರ್ವಹಣೆ ಇದರ ವಿಶೇಷ ಎಂದು ಕಂಪೆನಿ ಹೇಳಿದೆ. ಬೆಲೆ 20,490 ರೂಪಾಯಿಗಳು.

ವಿವರಗಳಿಗೆ: www.eurekaforbes.com

## ವಿಚಿ ಸ್ಕಿನ್ ಕ್ರೀಂ




ಸೌಂದರ್ಯ ಮತ್ತು ಆರೋಗ್ಯವರ್ಧಕ ಉತ್ಪನ್ನಗಳ ತಯಾರಿಕೆಗೆ ಪ್ರಸಿದ್ಧವಾದ ವಿಚಿ ಇದೀಗ ಮಳೆಗಾಲದಲ್ಲಿ ನಿಮ್ಮ ತ್ವಚೆಯ ರಕ್ಷಣೆಗೆ ಪೂರಕವಾದ ಕ್ಲಿಯರ್ ಸ್ಕಿನ್ ಕ್ರೀಂ ಬಿಡುಗಡೆ ಮಾಡಿದೆ.

ಲೋಷನ್, ಮಾಯಿಶ್ಚರೈಸರ್ ಮತ್ತು ನೋರ್ಮಡರ್ಮ್ ಕ್ರೀಂಗಳು ಈ ಸರಣಿಯಲ್ಲಿವೆ. ಮಳೆಗಾಲದಲ್ಲಿ ಕಾಡುವ ವಿವಿಧ ರೀತಿಯ ಚರ್ಮಸಂಬಂಧಿ ತೊಂದರೆಗಳಿಂದ ಇದು ರಕ್ಷಣೆ ನೀಡುತ್ತದೆ ಎಂದು ಕಂಪೆನಿ ಹೇಳಿದೆ. ಆನ್‌ಲೈನ್‌ನಲ್ಲೂ ಲಭ್ಯ. ಬೆಲೆ 690 ರೂಪಾಯಿಗಳಿಂದ ಆರಂಭ.

ಮಾಹಿತಿಗೆ: 8095069955

www.vichy.in

## ವೆಜ್ಜೀಸ್ ಟು ಗೊ




ನೈಸರ್ಗಿಕ ಆಹಾರ ಉತ್ಪನ್ನಗಳ ತಯಾರಿಕೆಗೆ ಹೆಸರುವಾಸಿಯಾದ ನೇಚರ್ ಫಸ್ಟ್ ಇದೀಗ ತರಕಾರಿ ಮಿಶ್ರಣಗಳ ಪೇಯ ಪರಿಚಯಿಸಿದೆ.

ಆರೋಗ್ಯಕರವಾದ ಮತ್ತು ಪೋಷಕಾಂಶಗಳಿಂದ ಕೂಡಿದ, ನೈಸರ್ಗಿಕ ತರಕಾರಿಗಳಿಂದ ಇದನ್ನು ತಯಾರಿಸಿದ್ದು, ರುಚಿಕರವಾಗಿದೆ. ಎಲ್ಲ ವಯೋಮಾನದವರಿಗೂ ಇದು ಸೂಕ್ತ ಎಂದು ಕಂಪೆನಿ ಹೇಳಿದೆ.

ರೆಗ್ಯುಲರ್ ಮತ್ತು ಸ್ಪೈಸಿ ಎಂಬ ಎರಡು ವಿಧದ ಸ್ವಾದಗಳ ಆಯ್ಕೆಯಲ್ಲಿ ಇದು ಲಭ್ಯ. ಆನ್‌ಲೈನ್‌ನಲ್ಲೂ ದೊರೆಯುತ್ತದೆ.

300 ಎಂಎಲ್‌ನ ಬಾಟಲಿಗೆ 80 ರೂಪಾಯಿ.

ಮಾಹಿತಿಗೆ: 9342483454 www.naturefirst.com

## ಲೆನೊವೊ ಸ್ಟಿಕ್ 300

ಕಂಪ್ಯೂಟರ್ ಮತ್ತು ಲ್ಯಾಪ್‌ಟಾಪ್ ತಯಾರಿಕೆಗೆ ಹೆಸರುವಾಸಿಯಾದ ಲೆನೊವೊ ಇದೀಗ ಮಿನಿ ಕಂಪ್ಯೂಟರ್ ಸ್ಟಿಕ್ 300 ಪರಿಚಯಿಸಿದೆ.

ಚಿಕ್ಕ ರಿಮೋಟ್ ಗಾತ್ರದ ಇದು ಯುಎಸ್‌ಬಿ ಸಂಪರ್ಕದ ಮೂಲಕ ಎಲ್‌ಸಿಡಿ/ಎಲ್‌ಇಡಿ ಟಿವಿಯನ್ನು ಕಂಪ್ಯೂಟರ್ ಆಗಿ ಪರಿವರ್ತಿಸುತ್ತದೆ. ವಿಂಡೋಸ್ 8.1 ಸಾಫ್ಟ್‌ವೇರ್ ಹೊಂದಿದ್ದು, ಇಂಟೆಲ್ ಆಟೊಮ್ ಪ್ರೊಸೆಸ್ಸರ್, 2 ಜಿಬಿ ರ್‍ಯಾಮ್ ಮತ್ತು 32 ಜಿಬಿ ಮೆಮೊರಿ ಇದರಲ್ಲಿದೆ.




ವೈ-ಫೈ, ಬ್ಲೂಟೂತ್ ಸಂಪರ್ಕ ಇದೆ.

ಬೆಲೆ 9000 ರೂಪಾಯಿ.

ವಿವರಗಳಿಗೆ: www.lenovo.com/in

## ಇನ್‌ಫೋಕಸ್ M530




ಸ್ಮಾರ್ಟ್‌ಫೋನ್ ತಯಾರಿಕಾ ಸಂಸ್ಥೆ ಇನ್‌ಫೋಕಸ್ ಇದೀಗ M530 ಎಂಬ ಹೊಸ ಮಾದರಿಯನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ.

5.5 ಇಂಚಿನ ತೆರೆ, 2 ಜಿಬಿ ರ್‍ಯಾಮ್, 16 ಜಿಬಿ ಮೆಮೊರಿ ಇದರಲ್ಲಿದೆ.

13 ಮೆಗಾಪಿಕ್ಸೆಲ್ ಹಿಂಬದಿ ಕ್ಯಾಮೆರಾ ಮತ್ತು 13 ಮೆಗಾಪಿಕ್ಸೆಲ್ ಸೆಲ್ಫಿ ಇದರ ವಿಶೇಷ. ಎರಡು ಸಿಮ್‌ನ ಸೌಲಭ್ಯ, 4ಜಿ ಸಂಪರ್ಕ ಮತ್ತು 3100 ಎಂಎಹೆಚ್ ಬ್ಯಾಟರಿ ಸಾಮರ್ಥ್ಯ ಹೊಂದಿದೆ.

ಬೆಲೆ 10,999 ರೂಪಾಯಿಗಳು.

ವಿವರಗಳಿಗೆ: www.infocusphone.com/in